E-mail : academic.pg@kud.ac.in
Website: kud.ac.in

ಕರ್ನಾಟಕ ವಿಶ್ವವಿದ್ಯಾಲಯ,
ಪಾವಟೆನಗರ, ಧಾರವಾಡ -580003

KARNATAK UNIVERSITY,
Pavate Nagar, Dharwad-580 003
'A' Grade NAAC Accredited
University Potential for Excellence

Phone: (0836) 2215270

Azadi Ka Amrit Mahotsav

Academic (PG/Ph.D) Section
ವಿದ್ಯಾಮಂಡಳ (ಪಿಜಿ/ಪಿಎಚ್.ಡಿ)ವಿಭಾಗ

No.KU/Aca/P.G./Ph.D/2023-24 | 11 Date: 19-05-2023

# ಸುತ್ತೋಲೆ

ವಿಷಯ:2022-23 ನೇ ಸಾಲಿನ ಸ್ನಾತಕೋತ್ತರ II, IV ಮತ್ತು VI ನೇ ಸೆಮೆಸ್ಟರಗಳಿಗೆ ಪ್ರವೇಶ ಪ್ರಕ್ರಿಯೆ ಜರುಗಿಸುವ ಕುರಿತು.

ಉಲ್ಲೇಖ:1. ಕ.ವಿ.ವಿ/ವಿಮಂ(ಎಸ್.&ಟಿ)/ಎಸ್‌ಎಸ್‌ಎಲ್-421/ಪಿ.ಜಿ.ಕೋರ್ಸ/ಸಿಇ/2023-24/79 ದಿ:17.05.2023

2. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 19-05-2023

ಕವಿವಿಯ ಎಲ್ಲ ಸ್ನಾತಕೋತ್ತರ ವಿಭಾಗಗಳು /ಕೇಂದ್ರಗಳು /ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ (ಪಿಜಿ)ಆಡಳಿತಾಧಿಕಾರಿಗಳು/ ಅಧ್ಯಕ್ಷರುಗಳು/ ನಿರ್ದೇಶಕರು/ ಸಂಯೋಜಕರು/ ಪ್ರಾಚಾರ್ಯರುಗಳ ಗಮನಕ್ಕೆ ತರಬಯಸುವುದೇನೆಂದರೆ, 2022-23ನೇ ಸಾಲಿನ ಎಲ್ಲ ಸ್ನಾತಕೋತ್ತರ II, IV ಮತ್ತು VIನೇ ಸೆಮೆಸ್ಟರಗಳ ಪ್ರವೇಶ ಪ್ರಕ್ರಿಯೆಯನ್ನು ಈ ಕೆಳಗಿನ ವೇಳಾಪಟ್ಟಿಯಂತೆ ಜರುಗಿಸಲು ತಿಳಿಸಲಾಗಿದೆ.

2022-23ನೇ ಸಾಲಿನ ಎಲ್ಲ ಸ್ನಾತಕೋತ್ತರ II, IV ಮತ್ತು VI ನೇ ಸೆಮೆಸ್ಟರ್‌ಗಳ ಪ್ರವೇಶ ಪ್ರಕ್ರಿಯೆಯ ವಿವರ

| Semester | Re-opening Date | Last date for admission | Submission of Admission List and Fee receipts to the Academic Section, KUD |
|---|---|---|---|
| PG II, IV & VI Sem | 01.06.2023 | 17.06.2023 | 24.06.2023 |

ಮುಂದುವರೆದು, ಸದರಿ ಪ್ರವೇಶ (Processing) ಅರ್ಜಿ ಸಂಸ್ಕರಣಾ ಶುಲ್ಕ ರೂ.250/-(125/-for SC/ST/Cat-1)ಗಳನ್ನು SBI Collect ಮುಖಾಂತರ ಶುಲ್ಕ ಭರಿಸಿದ ರಸೀದಿಯನ್ನು ವಿದ್ಯಾರ್ಥಿಗಳಿಂದ ಪಡೆಯುವುದು. ಮುಂದುವರೆದು, ಸ್ನಾತಕೋತ್ತರ I, III ಮತ್ತು Vನೇ ಸೆಮೆಸ್ಟರ್‌ನ ವಿದ್ಯಾರ್ಥಿಗಳಿಗೆ ವಿಭಾಗದ ಮುಖ್ಯಸ್ಥರು UUCMS ನಲ್ಲಿ promote ಎಂದು ನಮೂದಿಸಿ ನಂತರ II, IV ಮತ್ತು VI ನೇ ಸೆಮೆಸ್ಟರಗಳಿಗೆ ಈ ಕೆಳಗಿನ ವಿವರಗಳನ್ನು ಅನುಸರಿಸುವುದರೊಂದಿಗೆ ಪ್ರವೇಶ ಪಡೆದುಕೊಳ್ಳುವುದು.

**ಎಲ್ಲ ಸ್ನಾತಕೋತ್ತರ II, IV ಮತ್ತು VI ನೇ ಸೆಮೆಸ್ಟರ್‌ಗಳ ವಿದ್ಯಾರ್ಥಿಗಳಿಗೆ ಈ ಕೆಳಕಾಣಿಸಿದ ಅಂಶಗಳನ್ನು ವಿಶೇಷ ಗಮನಹರಿಸಿ ಪ್ರವೇಶ ನೀಡಬೇಕು.**

1. ಸ್ನಾತಕೋತ್ತರ II, IV ಮತ್ತು VI ನೇ ಸೆಮೆಸ್ಟರ್‌ಗಳ ವಿದ್ಯಾರ್ಥಿಗಳಿಗೆ ಯಾವುದೇ ವರ್ಗಾವಣೆ (Transfer)ಗೆ ಅವಕಾಶವಿರುವುದಿಲ್ಲ.
2. ಸ್ನಾತಕೋತ್ತರ I, III ಮತ್ತು Vನೇ ಸೆಮೆಸ್ಟರ್‌ಗೆ ಪ್ರವೇಶ ಪಡೆಯುವ ಸಮಯದಲ್ಲಿ ಶುಲ್ಕವನ್ನು ಕಂತುಗಳಲ್ಲಿ ಭರಿಸಲು ಅನುಮತಿ ನೀಡಿದ ವಿದ್ಯಾರ್ಥಿಗಳಿಂದ ಬಾಕಿ ಶುಲ್ಕವನ್ನು ಕಡ್ಡಾಯವಾಗಿ II, IV ಮತ್ತು VI ನೇ ಸೆಮೆಸ್ಟರ್ ಪ್ರವೇಶ ಸಮಯದಲ್ಲಿ ಭರಿಸಿಕೊಳ್ಳಬೇಕು.

3. ಪರೀಕ್ಷಾ ಶುಲ್ಕ: ಪರೀಕ್ಷಾ ವಿಭಾಗದಿಂದ ಹೊರಡಿಸಲಾದ ಅಧಿಸೂಚನೆ ಪ್ರಕಾರ ಪರೀಕ್ಷಾ ಶುಲ್ಕಗಳನ್ನು ಭರಿಸುವುದು.

4. SC/ST/Cat-I/IIA/IIB/IIIA/IIIB ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ III ಮತ್ತು Vನೇ ಸೆಮೆಸ್ಟರ್‌ಗೆ ಪ್ರವೇಶ ಪಡೆಯುವ ಸಮಯದಲ್ಲಿ ವಿವಿಧ ಶುಲ್ಕಗಳನ್ನು (ಪ್ರವೇಶ/ಪರೀಕ್ಷೆ) ವಿನಾಯಿತಿ ನೀಡಲಾಗಿರುತ್ತದೆ. ಸದರಿ ವಿನಾಯತಿ ನೀಡಿದ ಶುಲ್ಕಗಳು ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ /ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ಇಲಾಖೆಯಿಂದ ಮಂಜೂರಾದ ಶಿಷ್ಯವೇತನದ ಮೊತ್ತವು ಕವಿವಿಗೆ ಬರದೇ ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಜಮೆಯಾಗಿರುವುದರಿಂದ ವಿನಾಯತಿ ನೀಡಿದ ಶುಲ್ಕಗಳನ್ನು ಸದರಿ ವಿದ್ಯಾರ್ಥಿಗಳಿಂದ ಕಡ್ಡಾಯವಾಗಿ **IV ಮತ್ತು VI ನೇ** ಸೆಮೆಸ್ಟರ್ ಪ್ರವೇಶ ಸಂದರ್ಭದಲ್ಲಿ ಭರಿಸಿಕೊಳ್ಳಬೇಕು.

ಮೇಲ್ಕಾಣಿಸಿದ ಅಂಶಗಳನ್ನು ಗಮನಿಸಿ ಎಲ್ಲ ಸ್ನಾತಕೋತ್ತರ **II, IV ಮತ್ತು VI ನೇ** ಸೆಮೆಸ್ಟರಗಳಿಗೆ ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆಯನ್ನು **ದಿನಾಂಕ: 17.06.2023** ರ ಒಳಗಾಗಿ ಪೂರ್ಣಗೊಳಿಸಲು ಈ ಮೂಲಕ ತಿಳಿಸಲಾಗಿದೆ.

19.5.23

ಕುಲಸಚಿವರು

ಗೆ,

1. ಅಧ್ಯಕ್ಷರು/ಸಂಯೋಜಕರು/ನಿರ್ದೇಶಕರು ಎಲ್ಲ ಸ್ನಾತಕೋತ್ತರ ವಿಭಾಗಗಳು, ಕ.ವಿ.ವಿ ಧಾರವಾಡ.
2. ಅಧ್ಯಕ್ಷರು, ಎಂ.ಎಡ್. ಮತ್ತು ಕಾನೂನು ಅಧ್ಯಯನ ವಿಭಾಗ, ಧಾರವಾಡ
3. ಆಡಳಿತಾಧಿಕಾರಿಗಳು, ಕ.ವಿ.ವಿ. ಸ್ನಾತಕೋತ್ತರ ಕೇಂದ್ರ, ಗದಗ/ಕಾರವಾರ/ಹಾವೇರಿ.
4. ಪ್ರಾಚಾರ್ಯರು, ಕರ್ನಾಟಕ ಕಲಾ/ವಾಣಿಜ್ಯ/ವಿಜ್ಞಾನ/ ಮಹಾವಿದ್ಯಾಲಯ, ಧಾರವಾಡ(ಪಿಜಿ ಕೋರ್ಸುಗಳು).
5. ಸಂಯೋಜಕರು, ಎಂ.ಟಿ.ಟಿ.ಎಂ. ಅಧ್ಯಯನ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.
6. ಪ್ರಾಚಾರ್ಯರು, ಕ.ವಿ.ವಿ. ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಅಡಿಯಲ್ಲಿ ಸ್ನಾತಕೋತ್ತರ ಕೋರ್ಸುಗಳನ್ನು ನಡೆಸುತ್ತಿರುವ ಮಹಾವಿದ್ಯಾಲಯಗಳು (ಯಾದಿಯಂತೆ).
7. ನಿರ್ದೇಶಕರು, ಮಾಹಿತಿ ಮತ್ತು ತಂತ್ರಜ್ಞಾನ (I.T. Section) ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.(ಸದರ ಸುತ್ತೋಲೆಯನ್ನು ಕ.ವಿ.ವಿ ಅಂತರ್ಜಾಲದಲ್ಲಿ ಅಳವಡಿಸುವುದು.)

ಪ್ರತಿ ಸಾದರಪೂರ್ವಕವಾಗಿ:

1. ಹಣಕಾಸು ಅಧಿಕಾರಿಗಳು, ಹಣಕಾಸು ವಿಭಾಗ, ಕ.ವಿ.ವಿ.ಧಾರವಾಡ.
2. ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಾರ್ಯಾಲಯ, ಕ.ವಿ.ವಿ. ಧಾರವಾಡ.
3. ಆಪ್ತ ಕಾರ್ಯದರ್ಶಿಗಳು, ಕುಲಸಚಿವರ ಕಾರ್ಯಾಲಯ, ಕ.ವಿ.ವಿ. ಧಾರವಾಡ.
4. ಆಪ್ತ ಕಾರ್ಯದರ್ಶಿಗಳು, ಕುಲಸಚಿವರ (ಮೌಲ್ಯಮಾಪನ) ಕಾರ್ಯಾಲಯ, ಕ.ವಿ.ವಿ. ಧಾರವಾಡ.